(78)

ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/93/2015-16. ದಿನಾಂಕ:13-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಎ.ಎಂ.ಅಜ್ಜಯ್ಯ ತಂದೆ ಗುರುಬಸಯ್ಯ.<br>2)ಎ.ಎಂ.ಸಿದ್ದಯ್ಯ ತಂದೆ ಗುರುಬಸಯ್ಯ<br>3)ಗುರುಬಸಯ್ಯ ತಂದೆ ಶಿದ್ದಯ್ಯ<br>ಶಾಂತನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ತಿಪ್ಪೇಸ್ವಾಮಿ ತಂದೆ ಲೇಟ್ ಮಳ್ಳಪ್ಪ<br>ಎಂ.ಬಿ.ಅಯ್ಯನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಹಾರಕಬಾವಿ ಗ್ರಾಮದ ಸನಂ 568ಸಿ. 579ಎ. ವಿಸ್ತೀರ್ಣ 1-98. 1-83 ಎಕ್ರೆ ಜಮೀನುಗಳನ್ನು ಪಾಲು ವಿಭಾಗದ ನೊಂದಣಿ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹಾರಕಬಾವಿ ಗ್ರಾಮದ ಸನಂ 568ಸಿ. 579ಎ. ವಿಸ್ತೀರ್ಣ 1-98. 1-83 ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಶಾಂತನಹಳ್ಳಿ ಗ್ರಾಮದ ಎ.ಎಂ.ಅಜ್ಜಯ್ಯ ತಂದೆ ಗುರುಬಸಯ್ಯ. ಎ.ಎಂ.ಸಿದ್ದಯ್ಯ ತಂದೆ ಗುರುಬಸಯ್ಯ. ಇವರು ದಿನಾಂಕ 04-07-2015 ರಂದು ಡಾಕ್ಯುಮೆಂಟ್ ನಂಬರ್: 1044/2015-16 ರ ಪ್ರಕಾರ ಪಾಲು ವಿಭಾಗ ಪತ್ರ ಬರೆಯಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹಾರಕಬಾವಿ ಇವರು ನಮೂನೆ-21 ನೋಟಿಸನ್ನು ದಿನಾಂಕ 29-07-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಎಂ.ಬಿ.ಅಯ್ಯನಹಳ್ಳಿ ಗ್ರಾಮದ ತಿಪ್ಪೇಸ್ವಾಮಿ ತಂದೆ ಮಳ್ಳಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 02/2015-16. ದಿನಾಂಕ 22-08-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 22-03-2016 ರಿಂದ 13-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅರ್ಜಿದಾರರು ಹಾರಕಬಾವಿ ಗ್ರಾಮದ ಸನಂ 568ಸಿ. 579ಎ. ವಿಸ್ತೀರ್ಣ 1-98. 1-83 ಎಕ್ರೆ ಜಮೀನುಗಳು ನಮ್ಮ ತಂದೆಯವರಾದ ಗುರುಬಸಯ್ಯ ತಂದೆ ಸಿದ್ದಯ್ಯ ಇವರ ಹೆಸರಲ್ಲಿ ಖಾತೆ ಇರುವ ಜಮೀನುಗಳನ್ನು ಅವರು ಅಳತೆ ಮಾಡಿಸಿ ಅದರ ಪ್ರಕಾರ ನಾವುಗಳೆಲ್ಲರೂ ಒಪ್ಪಿ ದಿನಾಂಕ 04-07-2015 ರಂದು ಡಾಕ್ಯುಮೆಂಟ್ ನಂಬರ್: 1044/2015-16 ರ ಪ್ರಕಾರ ಪಾಲು ವಿಭಾಗ ಪತ್ರ ಬರೆಯಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೋಂಡಿರುತ್ತೇವೆ. ಕಾರಣ ಸದರಿ ಪಾಲು ವಿಭಾಗದ ಪತ್ರ ನಮ್ಮಗಳ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಸವರು ಸದರಿ ವಿವಾದಿತ ಜಮೀನುಗಳಲ್ಲಿ ಹಿಸ್ಸಾ ಹಕ್ಕು ಇರುವ ಕಾರಣ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಖಾತಾ ಬದಲಾವಣೆ ಮಾಡಲು ತಕರಾರು ಇರುವುದೆಂದು ಅರ್ಜಿ ಮಾತ್ರ ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ತಕರಾರುದಾರರು ತಮ್ಮ ತಕರಾರಿನ ಬಗ್ಗೆ ಸಂಬಂದಿಸಿದ ದಾಖಲೆಗಳನ್ನು ಹಾಜರಾಗಿ ಹೇಳಿಕೆ ನೀಡಿಲ್ಲದ ಕಾರಣ ಅವರಿಗೆ ಈ ಬಗ್ಗೆ ಆಸಕ್ತಿ ಇಲ್ಲವೆಂದು ಕಂಡು ಬಂದ ಕಾರಣ ನೊಂದಾಯಿತ ಪಾಲು ವಿಭಾಗದ ಪತ್ರಕ್ಕೆ ಸಂಬಂದಿಸಿರುವುದರಿಂದ ಅದನ್ನು ರದ್ದು ಪಡಿಸುವ ಅಧಿಕಾರ ಕಂದಾಯ ನ್ಯಾಯಾಲಯಕ್ಕೆ ಇಲ್ಲದಿರುವುದರಿಂದ ತಕರಾರು ಅರ್ಜಿಯನ್ನು ತಳ್ಳಿಹಾಕಿ ಈ ಕೆಳಗಿನಂತೆ ಈ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹಾರಕಬಾವಿ ಗ್ರಾಮದ ಸನಂ 568ಸಿ. 579ಎ. ವಿಸ್ತೀರ್ಣ 1-98. 1-83 ಎಕ್ರೆ ಜಮೀನುಗಳನ್ನು ದಿನಾಂಕ 04-07-2015 ರ ಡಾಕ್ಯುಮೆಂಟ್ ನಂಬರ್: 1044/2015-16 ರ ಪಾಲು ವಿಭಾಗದ ದಸ್ತಾವೇಜು ಪ್ರಕಾರ

| ಕ್ರಸಂ | ಹೆಸರು | ಸನಂ | ವಿಸ್ತೀರ್ಣ |
|---|---|---|---|
| 1 | 2 | 3 | 4 |
| 1 | ಎ.ಎಂ.ಅಜ್ಜಯ್ಯ ತಂದೆ ಗುರುಬಸಯ್ಯ | 568ಸಿ. | 1-98. |
| 2 | ಎ.ಎಂ.ಸಿದ್ದಯ್ಯ ತಂದೆ ಗುರುಬಸಯ್ಯ | 579ಎ. | 1-83 |

ಈ ಮೇಲಿನಂತೆ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 13-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಎ.ಎಂ.ಅಜ್ಜಯ್ಯ ತಂದೆ ಗುರುಬಸಯ್ಯ. ಎ.ಎಂ.ಸಿದ್ದಯ್ಯ ತಂದೆ ಗುರುಬಸಯ್ಯ. ಗುರುಬಸಯ್ಯ ತಂದೆ ಸಿದ್ದಯ್ಯ. ಶಾಂತನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ತಿಪ್ಪೇಸ್ವಾಮಿ ತಂದೆ ಮಳ್ಳಪ್ಪ ಎಂ.ಅಯ್ಯನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.